**ಸಾಕ್ಷಿಯನ್ನು ದಿಃ 12.3.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಕೆ.ಎಂ ವಕೀಲರಿಂದಃ**

ನಾನು ಪಿಯುಸಿ ವರೆಗೂ ವಿದ್ಯಾಭ್ಯಾಸವನ್ನು ಮಾಡಿಕೊಂಡಿದ್ದೇನೆ. ನನ್ನ ತಂದೆಯ ತಂದೆ ಹೆಸರು ಚೆನ್ನಪ್ಪ. ಚೆನ್ನಪ್ಪ ರವರು ಜಮೀನುಗಳನ್ನು ಹೊಂದಿದ್ದರು ಎಂದರೆ ಸರಿ. ಚೆನ್ನಪ್ಪ ಇವರು 3 ಜಮೀನುಗಳನ್ನು ಹೊಂದಿದ್ದರು. ಸರ್ವೆ ನಂಃ3/2 ರಲ್ಲಿ 1 ಎಕರೆ, ಸರ್ವೆ ನಂಃ5/1 ರಲ್ಲಿ 1 ಎಕರೆ 30 ಗುಂಟೆ, ಸರ್ವೆ ನಂಃ51/5 ರಲ್ಲಿ 32 ಗುಂಟೆ ಜಮೀನನ್ನು ಹೊಂದಿದ್ದರು. ಇವುಗಳನ್ನು ಹೊರತು ಪಡಿಸಿ ನಮ್ಮ ತಾತನ ಹೆಸರಿನಲ್ಲಿ ಬೇರೆ ಯಾವುದೇ ಜಮೀನು ಇರಲಿಲ್ಲ. ನನಗೆ ಈಗ 48 ವರ್ಷ ವಯಸ್ಸು. ಸುಮಾರು 20 ವರ್ಷಗಳ ಹಿಂದೆ ಪ್ರತ್ಯೇಕವಾಗಿ ನಮ್ಮ ನಮ್ಮ ಕುಟುಂಬದೊಂದಿಗೆ ವಾಸಿಸುತ್ತಿದ್ದೇವೆ ಎಂದರೆ ಸಾಕ್ಷಿಯು ಸುಮಾರು 7-8 ವರ್ಷಗಳಿಂದ ಪ್ರತ್ಯೇಕವಾಗಿ ಕುಟುಂಬದೊಂದಿಗೆ ವಾಸಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ಬಂಗಾರಪೇಟೆ ನಿವಾಸಿ ಎಂದರೆ ಸರಿ. ಬಂಗಾರಪೇಟೆಯಲ್ಲಿ ಬಾಡಿಗೆ ಮನೆಯಲ್ಲಿ ಸುಮಾರು 10 ವರ್ಷಗಳಿಂದ ವಾಸಿಸುತ್ತಿದ್ದೇನೆ.

ಸುಮಾರು 20 ವರ್ಷದಿಂದ ನಾನು ಹಾಗೂ ನನ್ನ ಸಹೋದರನಾದ ಪ್ರತಿವಾದಿ ನಂಃ1 ರವರು ಬೇರೆ ಬೇರೆ ಪಡಿತರ ಚೀಟಿಯನ್ನು ಹೊಂದಿದ್ದೇವೆ ಎಂದರೆ ಸಾಕ್ಷಿಯು ಸುಮಾರು 10 ವರ್ಷದಿಂದ ಬೇರೆ ಬೇರೆ ಪಡಿತರ ಚೀಟಿಯನ್ನು ಹೊಂದಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಾತನಾದ ಚೆನ್ನಪ್ಪನಿಗೆ ನನ್ನ ತಂದೆ ಒಬ್ಬರೇ ಮಗ. ನಮ್ಮ ತಂದೆಯವರು ಒಂದೇ ವಠಾರದಲ್ಲಿ 2 ಮನೆಯನ್ನು ಹೊಂದಿರುತ್ತಾರೆ. ಮನೆಗಳ ಖಾತೆ ನಂಬರನ್ನು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಸದರಿ ಮನೆಗಳನ್ನು ಪ್ರಸ್ತುತ ದಾವೆಯಲ್ಲಿ ಸೇರ್ಪಡಿಸಿಲ್ಲ ಎಂದರೆ ಸರಿ. ನನ್ನ ಸಹೋದರನಾದ ಪ್ರತಿವಾದಿ ನಂಃ1 ರವರಿಗೂ ನನ್ನ ತಂದೆಯ ಹೆಸರು ಅಂದರೆ ಮಲ್ಲಪ್ಪ ಅಂತ ಹೆಸರನ್ನು ಇಟ್ಟಿರುತ್ತಾರೆ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಂದು ಹೆಣ್ಣು ಮಗಳು ಇರುತ್ತಾರೆ. ನನ್ನ ತಾಯಿಯ ಹೆಸರು ಸುಶೀಲಮ್ಮ.

ನನ್ನ ತಾಯಿಯನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರಿಗೆ ವಯಸ್ಸಾದ್ದ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ.

ಪ್ರತಿವಾದಿ ನಂಃ3 ರವರ ಪರಿಚಯ ನನಗೆ ಇರುತ್ತದೆ. ನಮ್ಮ ಮನೆಯಲ್ಲಿ ನಾನೇ ಹಿರಿಯ ಮಗ ಎಂದರೆ ಸರಿ. ಬಂಗಾರಪೇಟೆಗೆ ಬಂದು ವಾಸಿಸುವ ಪೂರ್ವದಲ್ಲಿ ಸಂಸಾರದ ಎಲ್ಲಾ ಆಗುಹೋಗುಗಳನ್ನೆಲ್ಲಾ ಹಿರಿಯ ಮಗನಾದ ಕಾರಣ ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹಾಗೂ ನನ್ನ ಸಹೋದರನಾದ ಪ್ರತಿವಾದಿ ನಂಃ1 ರವರು ಇಬ್ಬರೂ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ3 ರವರನ್ನು ನಾನು ಚಿಕ್ಕವಯಸ್ಸಿನಿಂದ ನೋಡುತ್ತಾ ಬಂದಿದ್ದೇನೆ ಎಂದರೆ ಸರಿ. ದಾವಾ ಆಸ್ತಿ ಆದ ಸರ್ವೆ ನಂಃ51/5 ಕ್ಷೇತ್ರ 32 ಗುಂಟೆಗೆ ಸಂಬಂಧಪಟ್ಟಂತೆ ನನ್ನ ಸಹೋದರನಾದ ಪ್ರತಿವಾದಿ ನಂಃ1 ರವರು ಪ್ರತಿವಾದಿ ನಂಃ3 ರವರ ಪರವಾಗಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸಂಗತಿಯು ನನಗೆ 2018 ರಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ1 ರವರು ಕ್ರಯದ ಕರಾರು ಪತ್ರದ ಅನ್ವಯ ಖರೀದಿ ಪತ್ರವನ್ನು ಮಾಡಿಕೊಡದೇ ಇರುವ ಕಾರಣ ಪ್ರತಿವಾದಿ ನಂಃ3 ರವರು ಇದೇ ಮಾನ್ಯ ನ್ಯಾಯಾಲಯದಲ್ಲಿ ಅಸಲು ದಾವಾ ನಂಃ209/2012 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ಸಂಗತಿಯು ಪ್ರಸ್ತುತ ದಾವೆಯನ್ನು ಹೂಡಿದ ನಂತರ ನಮಗೆ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಅಸಲು ದಾವಾ ನಂಃ209/2012 ರಲ್ಲಿ ಪ್ರತಿವಾದಿ ನಂಃ1 ರವರು ತಮ್ಮ ವಕೀಲರ ಮುಖಾಂತರ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಿದ್ದು, ಸದರಿ ದಾವೆ ವಿಚಾರಣೆ ಆದ ನಂತರ ಸದರಿ ದಾವೆಯು ಪ್ರತಿವಾದಿ ನಂಃ3 ರವರ ಪರವಾಗಿ ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ ನಂಃ1 ಮತ್ತು 3 ರವರು ಸೇರಿಕೊಂಡು ಮೋಸ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ3 ರವರ ಪರವಾಗಿ ಪ್ರತಿವಾದಿ ನಂಃ1 ರವರು ಕ್ರಯದ ಕರಾರುಪತ್ರವನ್ನು ಮಾಡಿಕೊಡುವ ಕಾಲಕ್ಕೆ ದಾವಾ ಆಸ್ತಿ ಸರ್ವೆ ನಂಃ51/5 ರ ದಾಖಲಾತಿಗಳೆಲ್ಲಾ ಪ್ರತಿವಾದಿ ನಂಃ1 ರವರ ಹೆಸರಿನಲ್ಲಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಕಾಲಕ್ಕೆ ಭಾಗ

ಆಗಿರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ1 ರವರ ಹೆಸರು ಪಹಣಿ ಪತ್ರಿಕೆಯಲ್ಲಿ ವಿಭಾಗದ ಮುಖಾಂತರ ನಮೂದಾಗಿರುತ್ತದೆ ಎಂದರೆ ಹೂ, ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖರೀದಿ ಕರಾರು ಪತ್ರ ಆಗುವ ಕಾಲಕ್ಕೆ ಕಂದಾಯ ದಾಖಲಾತಿಗಳಲ್ಲಿ ಪ್ರತಿವಾದಿ ನಂಃ1 ರವರ ಹೆಸರು ವಿಭಾಗದ ಮುಖಾಂತರ ನಮೂದಾಗಿದ್ದರೂ ಕೂಡಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ನಂಃ209/2012 ಪ್ರತಿವಾದಿ ನಂಃ3 ರವರ ಪರವಾಗಿ ಆದ ನಂತರ ಸದರಿಯವರು ಇದೇ ಮಾನ್ಯ ನ್ಯಾಯಾಲಯದಲ್ಲಿ ಇಪಿ 14/2014 ನ್ನು ದಾಖಲು ಮಾಡಿಕೊಂಡು ಕೋರ್ಟ್ ಕಮೀಷನರ್ ಮೂಲಕ ಖರೀದಿ ಪತ್ರವನ್ನು ಮಾನ್ಯ ನ್ಯಾಯಾಲಯದಿಂದ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂಃ3 ರವರ ಪರವಾಗಿ ಖರೀದಿ ಕರಾರು ಪತ್ರ ಆದ ನಂತರ ಪ್ರತಿವಾದಿ ನಂಃ3 ರವರೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯಲ್ಲಿ ನಾನು ಇರುತ್ತೇನೆ ಎಂದು ನುಡಿಯುತ್ತಾರೆ. ಅಸಲು ದಾವಾ ನಂಃ209/2012 ತೀರ್ಪನ್ನು ನಾನು ಎಲ್ಲಿಯೂ ಕೂಡಾ ಪ್ರಶ್ನಿಸಿಲ್ಲ ಎಂದರೆ ಸದರಿ ಸಂಗತಿಯು ತಿಳಿದು ಬಂದ ನಂತರ ನಾವು ಪ್ರಸ್ತುತ ದಾವೆಯನ್ನು ಹೂಡಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಸುಮಾರು 20 ವರ್ಷದ ಹಿಂದೆಯೇ ದಾವಾ ಆಸ್ತಿ ನಂಃ3 ಸರ್ವೆ ನಂಃ51/5 ಪ್ರತಿವಾದಿ ನಂಃ1 ರವರ ಪಾಲಿಗೆ ಬಂದು, ಸದರಿ ಆಸ್ತಿಗೆ ಕುರಿತಂತೆ ಪ್ರತಿವಾದಿ ನಂಃ1 ರವರು ಪ್ರತಿವಾದಿ ನಂಃ3 ರವರಿಗೆ ಖರೀದಿ ಕರಾರು ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿ ನಂಃ3 ಕ್ಕೆ ಸಂಬಂಧಪಟ್ಟಂತೆ ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ನಂಃ3 ಸರ್ವೆ ನಂಃ51/5 ಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿ ನಂಃ1 ರವರ ಮಾತುಕೇಳಿ ನನ್ನ ತಾಯಿ ಹಾಗೂ ನನ್ನ ಸಹೋದರಿ ಪ್ರತ್ಯೇಕ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ ಪಿ 2 ರ ಪ್ರಕಾರ ನನ್ನ ತಾತನಾದ ಚೆನ್ನಪ್ಪ ರವರ ಹೆಸರಿನಲ್ಲಿ 5 ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು 2 ಸರ್ವೆ

ನಂಬರ್ ಒಂದೇ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನನ್ನ ತಾತ ಇನ್ನುಳಿದ ಆಸ್ತಿಗಳನ್ನು ಹೊಂದಿದ್ದರೂ ಕೂಡಾ ಅವುಗಳನ್ನು ಉದ್ದೇಶ ಪೂರ್ವಕವಾಗಿ ಸದರಿ ದಾವೆಯಲ್ಲಿ ಸೇರ್ಪಡಿಸಿಲ್ಲ ಎಂದರೆ ಸರಿಯಲ್ಲ. ಸುಮಾರು 20 ವರ್ಷದ ಹಿಂದೆ ನಮ್ಮ ಕುಟುಂಬದಲ್ಲಿ ಮೌಖಿಕವಾಗಿ ವಿಭಾಗವಾಗಿದ್ದು, ಸದರಿ ವಿಭಾಗದ ಅನ್ವಯ ದಾವಾ ಆಸ್ತಿ ನಂಃ3 ಪ್ರತಿವಾದಿ ನಂಃ1 ರವರ ಪಾಲಿಗೆ ಬಂದಿರುವ ಕಾರಣದಿಂದಾಗಿ ಸದರಿಯವರು ಪ್ರತಿವಾದಿ ನಂಃ3 ರವರ ಪರವಾಗಿ ಖರೀದಿ ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಃ1 ರವರ ಹೆಸರಿನಲ್ಲಿರುವ ಪಹಣಿ ಪತ್ರಿಕೆಯನ್ನು ನಾನು ಎಲ್ಲಿಯೂ ಕೂಡಾ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಅದಾಗಿರುವುದೇ ನಮಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ3 ರವರ ಹೆಸರಿನಲ್ಲಿ ದಾವಾ ಆಸ್ತಿ ನಂಃ3 ರ ಪಹಣಿ ಪತ್ರಿಕೆಗಳು ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ನಿಜಾಂಶ ಗೊತ್ತಿದ್ದರೂ ಕೂಡಾ ಪ್ರತಿವಾದಿ ನಂಃ1 ರವರೊಂದಿಗೆ ಮಿಲಾಫೆಯಾಗಿ ಪ್ರತಿವಾದಿ ನಂಃ3 ರವರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ನಮಗೆ ಮೋಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ